ಜೋರಾಗಿ ಕೂಗುತ್ತಾ ಆಹ್ವಾನಿಸಿದ್ದ. ಆದರೆ ಕಾಳ್ಗಿಚ್ಚು ಅಷ್ಟು ದೂರದಲ್ಲೇ ಅವನನ್ನು ಅಣಕಿಸುವಂತೆ ನಿಂತಿತ್ತು.

ಬೆಳಗಾಗುವುದರೊಳಗೆ ಶಂಭುವಿನ ಮನಸ್ಸು ಯೋಚನೆಗಳ ಹೊಡೆತಕ್ಕೆ ಸಿಕ್ಕಿ ಜರ್ಜರಿತವಾಗಿತ್ತು.

ತಾನು ಮಕ್ಕಳನ್ನು ಕರೆದುಕೊಂಡು ಬಂದಿದ್ದೇಕೆ – ಅವುಗಳ ಏಳಿಗೆಗೆ ಸ್ವಾಮಿಯ ಬಳಿ ಪ್ರಾರ್ಥಿಸಲು; ಆದರೆ ಆದದ್ದೇನು! ಸ್ವಾಮಿಗೆ ನನ್ನ ಮೊರೆ ಕೇಳಿಸಲಿಲ್ಲವೇ? ಅಥವಾ... ಅಥವಾ... ಬೇಕೆಂದೆ ಅವನು ನನ್ನ ಮಕ್ಕಳನ್ನು ಹೀಗೆ ಕೊಂದನೆ? ಅವನು ಕರುಣಾಮಯಿಯಲ್ಲವೇ?... ಎಷ್ಟು ಮಕ್ಕಳ ಜೀವಗಳು ನಾಮಾವಶೇಷವಾದವು?!... ಇದು ಕರುಣಾಮಯಿಯಾದ ದೇವರ ಕೆಲಸವೇ... ಅಥವಾ... ಇದೆಲ್ಲಾ ಮಿಥ್ಯೆಯೇ? ನಾನು ಇಷ್ಟು ವರ್ಷ ನಂಬಿದ್ದ ಸ್ವಾಮಿಯೇ ಮಿಥ್ಯೆಯೇ? ಇಷ್ಟು ಸಾವು, ಇಷ್ಟು ನೋವು ಏತಕ್ಕೆ?

ಯೋಚಿಸುತ್ತಾ ಹೋದಂತೆ ಶಂಭುವಿನ ಮನಸ್ಸಿನ ಮೇಲೆ ಅಗಾಧ ಪರಿಣಾಮವುಂಟಾಯಿತು. ಅವನ ಕಣ್ಣ ಮುಂದೆ ಅವನ ಹೆಂಡತಿಯ ಚಿತ್ರ ಬಂದಿತು; ನಗುತ್ತಿದ್ದ ತನ್ನ ಮಕ್ಕಳ ಚಿತ್ರ ಹಾದುಹೋಯಿತು.

ಶಕ್ತಿಯೆಲ್ಲಾ ಉಡುಗಿಹೋದವನ ಹಾಗೆ ಅಲ್ಲೇ ಕುಳಿತು ನಿಧಾನವಾಗಿ ತನ್ನ ಕೈಯಿಂದಲೇ ಹೊಂಡವನ್ನು ಅಗೆಯತೊಡಗಿದ. ನೆಲಗಟ್ಟಿ ಆಗಿತ್ತು. ಹಾಗಾಗಿ ಅವನ ಕೈ ಬೆರಳುಗಳಿಂದ ರಕ್ತ ಒಸರತೊಡಗಿತು. ಅದನ್ನು ಗಮನಿಸದೆ ಅಗೆಯುತ್ತಲೇ ಇದ್ದ.

ಸುಮಾರು ಅರ್ಧ ಗಂಟೆ ಕಾಲ ಹೀಗೆ ಅಗೆದ ಮೇಲೆ ನಜ್ಜುಗಿದ್ದ ಮಕ್ಕಳ ಮೃತದೇಹದ ಬಳಿ ಹೋದ. ನಡುಗುವ ಕೈಗಳಿಂದ ಅವೆರಡನ್ನು ಮೇಲಕ್ಕೆತ್ತಿಕೊಂಡು, ತಪ್ಪು ಹೆಜ್ಜೆ ಹಾಕುತ್ತಾ, ಅಗೆದಿದ್ದ ಹೊಂಡದ ಬಳಿ ಬಂದು ನಿಧಾನವಾಗಿ ಅವನ್ನು ಕೆಳಕ್ಕಿಳಿಸಿದ. ದುಃಖ ಒತ್ತರಿಸಿಬಂದಿತು. ತಡೆಯಲಾಗದೆ ಬಿಕ್ಕಿ ಬಿಕ್ಕಿ ಅಳತೊಡಗಿದ.

ಸ್ವಲ್ಪ ಸಮಾಧಾನವಾದ ಮೇಲೆ, ಮೃತ ದೇಹಗಳ ಮೆಲೆ ಮಣ್ಣನ್ನು ಮುಚ್ಚತೊಡಗಿದ.

ಅವನಿಂದ ಅಷ್ಟು ದೂರದಲ್ಲಿ ಜನ ತಲೆತಗ್ಗಿಸಿಕೊಂಡು ಹೋಗುತ್ತಿದ್ದರು.

ಕೆಲವು ನಿಮಿಷಗಳಾದ ಮೇಲೆ ಶಂಭು ಎದ್ದುನಿಂತ. ಅವನ ದೃಷ್ಟಿ ಸ್ವಾಮಿಯ ಬೆಟ್ಟದ ಕಡೆ ಹರಿಯಿತು. ಅವನ ಮುಖದ ಮೇಲೆ ಎಂತಹದೊ ನಿರ್ಧಾರ ಮೂಡಿತ್ತು. ದೃಢವಾದ ಹೆಜ್ಜೆಗಳನ್ನು ಇಡುತ್ತಾ ಬೆಟ್ಟದ ಕಡೆ ನಡೆಯತೊಡಗಿದ.

★★★

ಹೇ ಪ್ರಾಣವೇ, ನಿನ್ನ ಮಹತ್ವವನ್ನು ತಿಳಿದುಕೊಂಡು, ನಿನ್ನನ್ನು ಅವಹೇಳನ ಮಾಡದವನು ಎಂದೂ ನಾಶವಾಗುವುದಿಲ್ಲ. ಅವನ ವೀರ್ಯದಲ್ಲಿ ಅಮೋಘವಾದ ಅದ್ಭುತಶಕ್ತಿ ಇರುತ್ತದೆ. ಅವನ ಸಂತಾನ ಪರಂಪರೆ ಎಂದೂ ನಷ್ಟವಾಗುವುದಿಲ್ಲ.

★★★

ಬೆಟ್ಟದ ಮೇಲೆ ಲಕ್ಷಾಂತರ ಜನ ಸೇರಿದ್ದರು. ಇದ್ದ ಅಂಗೈ ಅಗಲದಷ್ಟು ಜಾಗದ ಮೇಲೆ ಒಬ್ಬರಿಗೊಬ್ಬರು ಅಂಟಿಕೊಂಡು ಸ್ವಾಮಿಯ ಜಯಘೋಷ ಮಾಡುತ್ತಾ ನಿಂತಿದ್ದರು. ನಡೆದುಹೋದ ಘಟನೆಯ ಬಗ್ಗೆ ಅವರಿಗಾರಿಗೂ ಯೋಚನೆ ಇರಲಿಲ್ಲ. ಮುಂದೆ ಕಾಣಬಹುದಾದ ಸ್ವಾಮಿಯ ದರ್ಶನದ ಬಗ್ಗೆ ಅವರ ಕಾತರ.